# ವಿ.ಎಂ.ಎಸ್.ಆರ್.ವಿ

# ಕಾಲೇಜ. ಹುನಗುಂದ

# ಇತಿಹಾಸ

# ಯೋಜನಾ ಕಾರ್ಯ

ಹೆಸರು :⇒ ಐಶ್ವರ್ಯ. ಮ. ಉಮಚಗಿ.

ವರ್ಗ :⇒ ಬಿ.ಎ. ಪ್ರಥಮ ಸೆಮಿಸ್ಟರ.

ರೋ.ನಂ :⇒ 08

ವಿಷಯ :⇒ ಎಳ್ಳ ಅಮಾವಾಸ್ಯೆಯ ಆಚರಣೆ.

ಮಾರ್ಗದರ್ಶಕರು :⇒ ಡಾ. ಎಸ್. ಆರ್. ನಾಗಣ್ಣವರ (ಪ್ರಾಧ್ಯಾಪಕರು)

# -: ಎಳ್ಳ ಅಮವಾಸೆ :-

## ಪ್ರಸ್ತಾವನೆ :-

ಭಾರತವು ಸಾಂಸ್ಕೃತಿಕವಾಗಿ ಶ್ರೀಮಂತವಾದ ದೇಶ. ಸರ್ವಧರ್ಮಗಳ ಸಮನ್ವಯತೆಯ ನಾಡು. ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿದ ದೇಶ. ವೇಷ ಭಾಷೆ ಬೇರೆಯಾದರೂ ಭಾವನೆಯಲ್ಲಿ ಸಾಮರಸ್ಯವನ್ನು ಮೂಡಿಸುವ ಶರಣ, ಸಾಧು, ಸುಧಾರಕರು ಹುಟ್ಟಿ ಬೆಳೆದ ಪುಣ್ಯಭೂಮಿ.

ಹಲವಾರು ಧರ್ಮ, ಜನಾಂಗದವರಿಗೆ ಪ್ರತ್ಯೇಕ ನಿಲುವಿದ್ದರೂ ಧರ್ಮಕ್ಕೊಂದು ಜಾತ್ರೆ, ಹಬ್ಬ, ಆಚರಣೆ ಮಾಡಿದರೂ ಇದರಲ್ಲೂ ವೈಶಿಷ್ಟ್ಯತೆಯನ್ನು ಎತ್ತಿತೋರಿಸುವ ನಾಡು. ಇಂತಹ ಹಬ್ಬಗಳಲ್ಲಿ ಎಳ್ಳಮವಾಸ್ಯೆಯೂ ಒಂದು. ಈ ಹಬ್ಬವನ್ನು ಭೂ ತಾಯಿಯ ಉಡಿ ತುಂಬುವ ಹಬ್ಬ ಎಂದು ಕರೆಯುವರು.

## ಹಬ್ಬದ ತಯಾರಿ :-

ವಿವಿಧ ಅಮವಾಸ್ಯೆಗಳಲ್ಲಿ ಒಂದಾದ ಎಳ್ಳ ಅಮವಾಸೆಯು ಪ್ರತಿ ವರ್ಷ ಚಳಿಗಾಲದಲ್ಲಿ ಬರುವಂತಹ ಹಬ್ಬವಾಗಿದೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಈ ಹಬ್ಬವನ್ನು ಭೂಮಿ ತಾಯಿಗೆ ಉಡಿ ತುಂಬುವ ಮೂಲಕ ಬಹಳ ವಿಜೃಂಭಣೆಯಿಂದ ಆಚರಿಸುವರು. ಭೂಮಿ ತಾಯಿಯು ಫಸಲನ್ನು ಹೊತ್ತು ನಿಂತಿರುವುದರಿಂದ ಇದನ್ನು ಭೂ ತಾಯಿಯ ಶ್ರೀಮಂತ ಕಾರ್ಯ ಎನ್ನುವರು.

ಉತ್ತರ ಕರ್ನಾಟಕದಲ್ಲಿ ಡಿಸೆಂಬರ್ ಅಂತ್ಯದವರೆಗೆ ಜನವರಿ ಆರಂಭದ ವೇಳೆಗೆ ಭೂಮಿಯು ಹಸಿರಿನಿಂದ ಕಂಗೊಳಿಸುತ್ತಿರುತ್ತದೆ. ಪ್ರತಿಯೊಬ್ಬ ರೈತರು ವರ್ಷ ಪೂರ್ತಿ ಪಟ್ಟ ಶ್ರಮದ ಪ್ರತಿಫಲ ಈ ಬೆಳೆಯ ರೂಪದಲ್ಲಿ ಭೂಮಿತಾಯಿಗೆ ಹಸಿರಿನ ಸೀರೆ ಉಡಿಸಿದಹಾಗೆ ಇರುವುದು.

ಈ ಬೆಳೆಯನ್ನು ಪೂಜೆ ಮಾಡಲು ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಹಲವಾರು ಪ್ರಕಾರ ಪದಾರ್ಥಗಳನ್ನು ತಯಾರಿಸಿಕೊಂಡು ಹೊಲಗಳಿಗೆ ಹೋಗಿ ಪೂಜೆಯನ್ನು ಮಾಡುವರು.

ಪೂಜೆಗೆ ಬೇಕಾದ ಪ್ರಕಾರಗಳನ್ನು 15 ದಿನಗಳ ಮುಂಚಿತವಾಗಿಯೇ ತಯಾರಿ ಮಾಡಲು ಪ್ರಾರಂಭಿಸುವರು ಹಬ್ಬಗಳೆಂದರೆ. ಸಜ್ಜೆಯ ರೊಟ್ಟಿ, ಎಳ್ಳು ಹೋಳಿಗೆ, ಶೇಂಗಾ ಹೋಳಿಗೆ, ಕರಿಗಡಬು, ಹೋಳಿಗೆ, ಶೇಂಗಾ ಮತ್ತು ಗುರೆಳ್ಳು ಚಟ್ನಿ. ಇವುಗಳನ್ನು ಮೊದಲೆ ತಯಾರಿಸಿಕೊಂಡು. ಹಬ್ಬದ ದಿನದಂದು ಹೋಳಿಗೆ. ಬದನೆಕಾಯಿ ಪಲ್ಲೆ, ಕಾಳು ಪಲ್ಲೆ. ಪುಲಾವು, ಹಸಿ-ಸಾರು, ಪಾಯಸ ರೀತಿಯ ತಿನಿಸುಗಳು. ಮುಂತಾದ ಪ್ರಕಾರ ಪದಾರ್ಥಗಳನ್ನು ತಯಾರಿಸಿಕೊಂಡು. ದೊಡ್ಡದಾದ ಬುತ್ತಿಯನ್ನು ಕಟ್ಟಿ ಹೊಲ, ಗದ್ದೆ, ತೋಟಗಳಿಗೆ ಹೋಗಲು ತಯಾರಾಗುವರು. ರೈತರು ತಮ್ಮ ಎತ್ತು ಮತ್ತು ಬಂಡಿಗಳನ್ನು ತೊಳೆದು ಸುಂದರವಾಗಿ ಶೃಂಗರಿಸಿ ಕುಟುಂಬದ ಸದಸ್ಯರು, ಬಂಧುಬಾಂಧವರು ಎಲ್ಲರೂ ಸೇರಿ ಹಿದರಲ್ಲಿ (ಬಂಡಿಯಲ್ಲಿ) ಹೊಲಗಳಿಗೆ ಹೋಗುವರು.

*** ಪೂಜೆಯನ್ನು ಮಾಡುವ ವಿಧಾನ :-**

ಹೊಲಕ್ಕೆ ಹೋದ ನಂತರ ಹಿಲ್ಲ ಸಮಸ್ತ ಕುಟುಂಬದವರು ಸೇರಿ ಹೊಲದಲ್ಲಿರುವ ಬನ್ನಿ ಮರಕ್ಕೆ ಸೀರೆಯನ್ನು ಉಡಿಸಿ 5 ಕಲ್ಲುಗಳನ್ನು ಇಟ್ಟು ಹೊಲದಲ್ಲಿರುವ ಜೋಳದ 5 ಎಳೆಯನ್ನು ಇಟ್ಟು ಹಿದಲ್ಲಿ ನಾವು ತಯಾರಿಸಿದ ಪ್ರಕಾರದ ಸ್ವಲ್ಪ ಭಾಗವನ್ನು ಪ್ರತಿ ಎಲೆಯಲ್ಲಿ ಇಡಲಾಗುವುದು. ನಂತರ ಪಚ್ಚಗಿತ, ಕುಂಕುಮವನ್ನು ಕಲ್ಲಿಗೆ ಹಚ್ಚಿ ಉದುನಕಡ್ಡಿಯನ್ನು ಬೆಳಗುವರು.




ಯಾದಗಿರಿ
ಕರ್ನಾಟಕ
ಎಳ್ಳಮಾವಾಸ್ಯೆಯ ಖುಷಿ...

ನಂತರ 5 ಜನರು ಆ 5 ಎಲೆಗಳನ್ನು ಅದರಲ್ಲಿರುವ ಆಹಾರ ಸಮೇತವಾಗಿ ಕೈಗೆತ್ತಿಕೊಂಡು ಮರವನ್ನು ಸುತ್ತುತ್ತ ಹೊಲದ ತುಂಬೆಲ್ಲ ಆ ಆಹಾರ-ವನ್ನು ಚೆಲ್ಲುತ್ತ ಮುಂದೆ ಸಾಗುವರು. ಹೀಗೆ ಮಾಡುವಾಗ ಹುಲ್ಲುಲಿಗೋ. ಚೆಲ್ಲಾಂಬ್ರಿಗೋ ಎಂದು ಹೇಳುವರು. ಇದರ ಅರ್ಥ ಹುಲ್ಲುಹುಲ್ಲಿಗೂ ಆಹಾರವನ್ನು ಚೆಲ್ಲಿರಿ ಎಂದು. (ಹುಲ್ಲುಹುಲ್ಲಿಗೂ, ಚೆಲ್ಲಿರಿ ಚೆಲ್ಲಿರಿ ಎಂದು). ಕೆಲವು ಕಡೆ ಪಂಚ ಪಾಂಡವರನ್ನು ಇಟ್ಟು ಪೂಜೆಯನ್ನು ಸಲ್ಲಿಸುವರು. ನಂತರ ಭೂಮಿ ತಾಯಿಗೆ ಈ ನೆಲದ ಫಸಲು ಚೆನ್ನಾಗಿ ಬರಲಿ ಎಂದು ನಮಸ್ಕರಿಸಿ ಊಟಕ್ಕೆ ಕೂಡುವರು. ಎಲ್ಲರೂ ಒಟ್ಟಿಗೆ ಊಟ ಮಾಡಿ ಸಂಜೆಯ ಹೊತ್ತಿಗೆ ಮನೆಗೆ ಹೋಗುವರು.

## * ಹಬ್ಬದ ಐತಿಹ್ಯ :

ಇಂದು ದಕ್ಷಿಣಾಯನದ ಮಾರ್ಗಶಿರ ಮಾಸದ ಅಮಾವಾಸೆಯ ದಿನ. ಈ ದಿನವನ್ನು ಮೊದಲಿಂದಲೂ ಎಳ್ಳಮಾವಾಸ್ಯೆ ಎಂದು ಆಚರಿಸಿಕೊಂಡು ಬರಲಾಗುತ್ತಿದೆ ಎಳ್ಳು ಬೆಳೆ ಬರುವ ಅಮಾವಾಸ್ಯೆಯ ದಿನವಿದು.

ಕರ್ನಾಟಕದಲ್ಲಿ ಹಾಗೂ ಆಂಧ್ರಪ್ರದೇಶದಲ್ಲಿ ರೈತರು ಈ ಎಳ್ಳ ಅಮಾವಾಸೆಯನ್ನು ಆಚರಿಸುವರು ಈ ದಿನಕ್ಕೊಂದು ಐತಿಹ್ಯವಿದೆ. ಪಾಂಡವರು ಕುರುಕ್ಷೇತ್ರ ಯುದ್ಧದಲ್ಲಿ ಮಡಿದ ~~ಬಳಿ ಈ ಎಳ್ಳಮಾವಾಸ್ಯೆ~~ ತಮ್ಮ ಬಂಧುಮಿತ್ರರಿಗಾಗಿ ಪಿಂಡ ಪ್ರಧಾನ ಮಾಡಿದ ದಿನ ಈ ಎಳ್ಳಮಾವಾಸೆ. ಈ ದಿನ ಮಲೆನಾಡು, ದಕ್ಷಿಣ ಕನ್ನಡ, ಉತ್ತರ ಕನ್ನಡಗಳಲ್ಲಿ ಒಂದೊಂದು ರೀತಿಯಲ್ಲಿ ಆಚರಿಸುವರು.




ನಂತರ ಕುಟುಂಬಸ್ಥರೆಲ್ಲಾ ಸೇರಿ
ಒಂದೆಡೆ ಕುಳಿತು ಕುಟುಂಬ ಭೋಜನ

* ಶ್ರಾದ್ಧ :-

ಮೊದಲೇ ಹೇಳಿದಂತೆ ಇಂದು ಪಾಂಡವರು ಮಹಾಭಾರತದಲ್ಲಿ ಮಡಿದ ತಮ್ಮವರಿಗಾಗಿ ತರ್ಪಣ ಬಿಟ್ಟ ದಿನ. ಅಂದರೆ ಇದು ಶ್ರಾದ್ಧ ಕ್ರಮಗಳನ್ನು ನಡೆಸಲು ಸೂಕ್ತ ದಿನ. ಈ ದಿನ ತಿಲ ತರ್ಪಣ ಬಿಟ್ಟು, ಬಡವರಿಗೆ ಊಟ ಹಾಕಿ, ಧಾನಗಳನ್ನು ನೀಡಿ ಶ್ರಾದ್ಧ ಕ್ರಿಯೆಗಳನ್ನು ನಡೆಸುವುದರಿಂದ ಬದುಕಿನಲ್ಲಿ ಶಾಂತಿ, ಸಮೃದ್ಧಿ ನೆಲೆಸುತ್ತದೆ ಎಂಬ ನಂಬಿಕೆ ಇದೆ. ವಿಶೇಷವಾಗಿ ಇಂದು ಎಳ್ಳನ್ನು ದಾನ ಮಾಡಲಾಗುತ್ತದೆ. ಎಳ್ಳಿಗೆ ಪಾಪ ನಾಶ ಮಾಡುವ ಶಕ್ತಿ ಇದೆ. ಇಂದು ಜನರು ಪಿತ್ರಾಂತರ್ಯಾಮಿ ಶ್ರೀ ಹರಿ ಪೂಜೆ ಕೂಡ ಕೈಗೊಳ್ಳುತ್ತಾರೆ. ಇದರಿಂದ ಕುಟುಂಬದಲ್ಲಿ ಮಡಿದ ಎಲ್ಲ ಪೂರ್ವಜರೂ ಸಂತೋಷಗೊಂಡು ತಮ್ಮ ಮುಂದಿನ ತಲೆಮಾರುಗಳನ್ನು ಉತ್ತಮ ರೀತಿಯಲ್ಲಿ ಆಶೀರ್ವಾದ ಮಾಡಲಿದ್ದಾರೆ. ಎನ್ನಲಾಗುತ್ತದೆ.

* ದೇವಾಲಯಗಳಲ್ಲಿ ಪ್ರಾರ್ಥನೆ :-

ಈ ದಿನ ಉತ್ತಮ ಉಳುಮೆಯಿಂದ ಉತ್ತಮ ಫಸಲು ಬರಲಿ ಎಂದು ದೇವಾಲಯದಲ್ಲಿ ವಿಶೇಷ ಪೂಜೆಯನ್ನು ಮಾಡಿಸುವರು. ಇನ್ನು ಶನಿ ದೋಷವಿರುವವರು & ಸಾಡೇಸಾತಿ ನಡೆಸುತ್ತಿರುವವರು. ಈ ದಿನ ಶನಿಯನ್ನು ಒಲಿಸಲು ಪೂಜೆ ಮಾಡಿ ಪ್ರಾರ್ಥನೆ ಸಲ್ಲಿಸುತ್ತಾರೆ.

* ಸಮುದ್ರ ಸ್ನಾನ :-

ದಕ್ಷಿಣ ಕನ್ನಡ, ಮಲೆನಾಡು ಭಾಗಗಳಲ್ಲಿ ಈ ದಿನ ತೀರ್ಥಸ್ನಾನವೇ ಪ್ರಮುಖವಾದುದು. ಎಳ್ಳಮಾವಾಸ್ಯೆಯ ದಿನ ತರ್ಪಣ ಬಿಡುವ ಮೊದಲ ದಕ್ಷಿಣ ಕನ್ನಡದ ಜನರು ಸಮುದ್ರದಲ್ಲಿ ಮುಳುಗು ಹಾಕಿದರೆ ಇತರೆಡೆಯ ಜನರು ನದಿಗಳಲ್ಲಿ ತೀರ್ಥಸ್ನಾನ ಮಾಡಿ ಪಿತೃಗಳಲ್ಲಿ ಪ್ರಾರ್ಥಿಸುತ್ತಾರೆ.






*** ವೈಜ್ಞಾನಿಕ ಹಿನ್ನಲೆ :-**

ರೈತರು ಜಮೀನಿನಲ್ಲಿ ಬೆಳೆದ ಎಳ್ಳು ಹಾಗೂ ಬೆಲ್ಲವನ್ನು ಚಿಮ್ಮುತ್ತಾರೆ. ಈ ಎಳ್ಳು ಹಾಗೂ ಬೆಲ್ಲವು ಜಮೀನಿನಲ್ಲಿರುವ ಹುಳುಗಳಿಗೆ ಆಹಾರ ಎಂದೂ ಹೇಳಲಾಗುತ್ತದೆ. ಎರೆಹುಳುವಿನಂತಹ ಜೀವಿಗಳು ಭೂಮಿಯ ಫಲವತ್ತತೆಯನ್ನು ಕಾಪಾಡುತ್ತವೆ.

ಚಳಿಗಾಲದಲ್ಲಿ ಮಾನವನ ದೇಹದಲ್ಲಿ ಉಷ್ಣ ಅಂಶ ಕಡಿಮೆ ಇರುತ್ತದೆ. ಈ ಸಂದರ್ಭದಲ್ಲಿ ಈ ಎಳ್ಳಿನಿಂದ ತಯಾರಿಸಿದ ಆಹಾರವನ್ನು or ಎಳ್ಳು ಹಾಗೂ ಬೆಲ್ಲ-ವನ್ನು ಸೇವಿಸುವುದರಿಂದ ದೇಹದಲ್ಲಿ ಉಷ್ಣದ ಅಂಶ ಹೆಚ್ಚಾಗಿ, ಬಿರುಕು ಬಿಟ್ಟ ಚರ್ಮ ಕೂಡಿಕೊಳ್ಳುತ್ತದೆ. ಹೊಲದಲ್ಲಿ ಚಿಮ್ಮುವಂತಹ ಆಹಾರವನ್ನು ಸೇವಿಸಿದ ಜೀವಿಗಳ ದೇಹದಲ್ಲಿ ಸಹ ಉಷ್ಣ ಅಂಶ ಹೆಚ್ಚಾಗುತ್ತದೆ. ಇಂತಹ ವೈಜ್ಞಾನಿಕ ಹಿನ್ನಲೆಯನ್ನು ಹೊಂದಿದ ಎಳ್ಳುಮಾವಾಸ್ಯೆ ವಿಶೇಷವಾಗಿ ತೋರುತ್ತದೆ.

*** ಉಪಸಂಹಾರ :-**

ಸಾಂಸ್ಕೃತಿಕ ಪರಂಪರೆಯ 3 ಪ್ರಕಾರಗಳಲ್ಲಿ ಒಂದಾದ ಅಮೂರ್ತ ಪರಂಪರೆಯ ಭಾಗವಾಗಿ ಈ ಹಬ್ಬವನ್ನು ಆಚರಣೆ ಮಾಡಲಾಗುತ್ತದೆ. ಇದು ರೂಢಿ, ಸಂಪ್ರದಾಯಗಳ ಮೂಲಕ ಹಲವಾರು ತಲೆಮಾರುಗಳಿಂದ ವಂಶಪಾರಂಪರಿಕವಾಗಿ ಬಂದ ಹಬ್ಬವಾಗಿದೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ರೈತರು ತಮಗೆ ಉತ್ತಮ ಇಳುವರಿ ನೀಡಿದ ಭೂಮಿಗೆ ಧನ್ಯವಾದ ಹೇಳಲು ಈ ಹಬ್ಬದ ಆಚರಣೆ ಮಾಡುತ್ತಾರೆ. ಉಡುಪಿ ಜಿಲ್ಲೆಯ ಮಲ್ಪೆಯಲ್ಲಿರುವ ವಡಭಾಂಡೇಶ್ವರ ದೇವಾಲಯದಲ್ಲಿ ಇಂದು ಬಲರಾಮನನ್ನು ದರ್ಶನ ಮಾಡುವು-ದರಿಂದ ಬಹಳಷ್ಟು ಒಳಿತಾಗುತ್ತದೆ ಎಂಬ ನಂಬಿಕೆ ಇದೆ. ಇದು ವೈಜ್ಞಾನಿಕ ಹಿನ್ನಲೆಯ ಧಾರ್ಮಿಕ ಆಚರಣೆಯಾಗಿದ್ದು ಎಲ್ಲರ ಮನೆ ಮನದಲ್ಲಿ ಸಂತೋಷ, ಸಂಭ್ರಮವು ತರುತ್ತದೆ.





THANK

YOU